# ಪ್ರತಿಸಲ ಮಗು ಹೆತ್ತ ಮೇಲೂ ಮತ್ತೆ ಕನ್ಯೆಯಾಗುವ ಮಾಧವಿ

ಉದ್ಯೋಗಪರ್ವದಲ್ಲೊಂದು
ಪೂರ್ವಕಥಾ ಪ್ರಸಂಗ
ಗಾಲವ ಅಂತ ಒಬ್ಬವಿಶ್ವಾಮಿತ್ರನ ಶಿಷ್ಯ ಅಂತ ಅವನೇ ಹೇಳಿಕೊಳ್ಳುತ್ತಾನೆ. 'ನಿನ್ನಿಂದ ಪಾಠ ಕಲಿತಿದೇನೆ, ನಾನು ಗುರುದಕ್ಷಿಣೆ ಕೊಡಬೇಕು, ಏನು ಕೊಡಲಿ' ಅಂತ ಆಗ್ರಹ ಮಾಡುತ್ತಾನೆ. ನನಗೆ ಗುರುದಕ್ಷಿಣೆ ಬೇಡ ಎಂದು ಎಷ್ಟು ಹೇಳಿದರೂ ಕೇಳಲೊಲ್ಲ. ವಿಶ್ವಾಮಿತ್ರನಿಗೆ ಕೋಪ ಬಂದು 'ಒಂದು ಕಿವಿ ಮಾತ್ರ ಕಪ್ಪಾಗಿರಬೇಕು, ಮೈಯೆಲ್ಲ ಅಚ್ಚ ಬಿಳಿಯಿರಬೇಕು ಅಂಥ ಎಂಟು ನೂರು ಕುದುರೆಗಳನ್ನು ಕೊಡು' ಎನ್ನುತ್ತಾನೆ. ಗಾಲವ ಕಂಗಾಲಾಗುತ್ತಾನೆ. ಏನು ಮಾಡಿದರೂ ಅಂಥ ಗುರುದಕ್ಷಿಣೆ ಕೊಡುವುದಕ್ಕಾಗುವುದಿಲ್ಲ, ನನ್ನ ಸತ್ಯ ಕೆಟ್ಟು ಹೋಯಿತು ಎಂದು ಕಂಗೆಟ್ಟು ನಿಂತಿರುವಾಗ ಗರುಡ ಅವನ ಹತ್ತಿರ ಬಂದು, ನನ್ನ ಗೆಳೆಯ ಯಯಾತಿ ಇದಾನೆ, ಅವನು ತೀರಾ ಸಿರಿವಂತ ಮಹಾದಾನಿ, ಅವನ ಹತ್ತಿರ ಕೇಳೋಣ ಬಾ ಎಂದು ಕರೆದುಕೊಂಡು ಹೋಗುತ್ತಾನೆ ಇಷ್ಟು ಹಿಂದಿನ ಕಥೆ.

***

**ಯಯಾತಿ:** ನೀನು ನನ್ನ ಗೆಳೆಯ. ನಾನು ಅವತ್ತಿನ ಥರ ಇವತ್ತಿಲ್ಲ ನನ್ನ ಹತ್ತಿರ ಇವತ್ತು ಹಣ ಇಲ್ಲ. ಇದ್ದ ಸಂಪತ್ತೂ ಬರಿದಾಗುತ್ತಿದೆ. ಹಾಗಂತ ನೀವು ಬಂದಿರುವುದನ್ನು ವ್ಯರ್ಥಮಾಡಲಾರೆ. ಬ್ರಾಹ್ಮಣ ಋಷಿಯ ಆಸೆ ಬಯಕೆಯನ್ನು ಮುರಿಯುವುದೂ ಇಷ್ಟ ಇಲ್ಲ

ನಾಕು ವಂಶಕೂ ಏಳಿಗೆ ತರುವ ಮಗಳಿದಾಳೆ ನನಗೆ ದೇವಕುಮಾರಿಯ ರೂಪು. ಧರ್ಮಿಷ್ಠೆ. ಎಲ್ಲ ಧರ್ಮವನ್ನೂ ಬೆಳೆಸಬಲ್ಲವಳು. ಈ ನನ್ನ ಬಾಲೆಯ ರೂಪ ನೋಡಿ ದಿನಾ ಅವಳ ಬಯಕೆಯಲ್ಲೇ ದೇವತೆಗಳು ಮನುಷ್ಯರು ರಾಕ್ಷಸರು ಕೂಡ ಸದಾ ಅವಳನ್ನೇ ಬಯಸತಾ ಇರತಾರೆ. ಇವಳಿಗೆ ಶುಲ್ಕವಾಗಿ ರಾಜ್ಯವನ್ನೇ ಬೇಕಾದರೂ ಕೊಟ್ಟು ಬಿಡುತ್ತಾರೆ

ಇನ್ನು ಕರೀ ಕಿವಿ ಕುದುರೆ, ಅದೂ ಬರೀ ಎರಡು ನಾಕು ನೂರು ಏನು ಮಹಾ! ನೋಡಿ, ತಾವು ನನ್ನ ಮಗಳು ಈ ಮಾಧವಿಯನ್ನು ಸ್ವೀಕರಿಸಿ. ನನಗೂ ಮೊಮ್ಮಕ್ಕಳಾದ ಹಾಗಾಗುತ್ತದೆ, ಹಾಗಂತ ಹರಸಿ

ಗರುಡ ಪಕ್ಷಿಯ ಜೊತೆ ಗಾಲವನೂ ಆ ಕನ್ಯೆಯನ್ನು ಪಡೆದುಕೊಂಡು ಮತ್ತೆ ಕಾಣುತ್ತೇವೆ ಎಂದು ಹೇಳಿ ಹೊರಟರು.

ಒಳ್ಳೆಯದಾಯಿತು, ಇವಳ ದೆಸೆಯಿಂದ ಈಗ ಕುದುರೆ ಸಿಕ್ಕೇ ಸಿಗುತ್ತದೆ ಎಂದಿತು ಗರುಡ

ಹಾಗಂದು ತನ್ನಷ್ಟಕ್ಕೆ ತಾನು ತನ್ನ ಮನೆಗೆ ಹೋಯಿತು. ಈ ಕನ್ಯೆಗೆ ತೆರ ಕೊಡುವ ಸಾಮರ್ಥ್ಯ ಯಾವ ರಾಜನಿಗಿದೆ ಎಂದು ಯೋಚಿಸಿದ ಗಾಲವ

ಕನ್ಯೆಯ ಜತೆ ಇಕ್ಷ್ವಾಕು ಕುಲದ ಹರ್ಯಶ್ವನ ಬಳಿಗೆ ಬಂದು ಹೀಗೆಂದ:

'ರಾಜೇಂದ್ರ ಇದು ನನ್ನ ಕನ್ಯೆ. ಬಸಿರಾಗಿ ಕುಲ ಹೆಚ್ಚಿಸಬಲ್ಲವಳು ಹೆಂಡತಿಯಾಗಿ ಸ್ವೀಕರಿಸು. ಅದಕ್ಕೆ ಬೇಕಾದ ಶುಲ್ಕ ಕೊಡು'.

ಹರ್ಯಶ್ವ ಸಾಕಷ್ಟು ಯೋಚನೆ ಮಾಡಿದ. ಬಿಸಿಯಾದ ನಿಟ್ಟುಸಿರು ಬಿಟ್ಟ. ಅವನಿಗೆ ಮಕ್ಕಳು ಬೇಕಾಗಿತ್ತು. ತೀರಾ ಉಬ್ಬಿರುವ ಆರು, ತೀರ ಸೂಕ್ಷ್ಮವಾದ ಐದು, ಗಂಭೀರವಾದವು ಮೂರು, ಕೆಂಪಗಿನವು ನಾಕುಎಲ್ಲಾ ಲಕ್ಷಣಗಳೂ ಅಚ್ಚುಕಟ್ಟಾಗಿವೆ. ದೇವತೆಗಳಲ್ಲೂ ಅಪರೂಪ ಈ ಲಕ್ಷಣಗಳು. ಬೇಕಾದಷ್ಟು ಮಕ್ಕಳನ್ನು ಹಡೆಯುತ್ತಾಳೆ. ಚಕ್ರವರ್ತಿಗಳಾಗಬಲ್ಲ ಮಕ್ಕಳನ್ನು ಹೆರಲು ಈಕೆ ತಕ್ಕನಾದವಳು ಎಂದುಕೊಂಡ ರಾಜ

'ಇವಳಿಗೆ ಕೊಡಬೇಕಾದ ಶುಲ್ಕ ಏನು? ನನ್ನ ಸಂಪತ್ತು ನೋಡಿಕೊಂಡು ಹೇಳು ದ್ವಿಜಶ್ರೇಷ್ಠ'

'ಒಂದು ಕಿವಿ ಕಪ್ಪಾಗಿರುವ ಎಂಟು ನೂರು ಬಿಳಿ ಕುದುರೆ ಬೇಕು ಸ್ವಾಮಿ ತಿಂಗಳ ಹಾಗೆ ಬೆಳ್ಳಗಿರಬೇಕು. ಒಳ್ಳೆಯ ಮೈಕಟ್ಟಿರಬೇಕು. ಇಷ್ಟು

ಕೊಟ್ಟರೆ ಇವಳು ನಿನ್ನವಳು, ನಿನ್ನ ಮಕ್ಕಳ ತಾಯಿ. ಅಗಲ ಕಣ್ಣಿನವಳು ಇವಳನ್ನು ನೋಡು

ಇವಳ ಯೋನಿಯಲ್ಲಿ ಅರಣಿಯಲ್ಲಿ ಬೆಂಕಿ ಇದ್ದ ಹಾಗೆ ನಿನ್ನ ಸಂತಾನ ಇದೆ'

ಆ ಮಾತು ಕೇಳಿ, ಕಾಮ ಆವರಿಸಿದ ರಾಜ ಹೀಗೆಂದ:

'ಬೇರೆ ತರದ ಕುದುರೆಗಳು ಬೇಕಾದಷ್ಟಿವೆ ಅಂಥ ಕುದುರೆಗಳು ಬರೇ ಇನ್ನೂರಿವೆ ಅಷ್ಟೆ ಅಷ್ಟೂ ತೆಗೆದುಕೊಂಡು ಅವಳನ್ನು ಕೊಡು ನಾನು ಒಂದೇ ಒಂದು ಮಗು ಹುಟ್ಟಿಸಿಕೋತಿನಿ'

ಅದಕ್ಕೆ ಮಾಧವಿ ಗಾಲವನಿಗೆ ಹೇಳಿದಳು:

'ನನಗೆ ವರ ಇದೆ. ಪ್ರತಿ ಸಾರಿ ಮಗು ಹೆತ್ತ ಮೇಲೂ ಮತ್ತೆ ನಾನೇ ಕನ್ಯೆಯಾಗುತೀನಿ. ಇವನಿಗೆ ನನ್ನನ್ನ ಕೊಡು. ಆ ಕುದುರೆ ತಗೋ

ಇನ್ನೂ ಆರ್ನೂರು ಕುದುರೆಗೆ ಇನ್ನೂ ಮೂರು ಜನ ರಾಜರು ಬೇಕು. ಒಟ್ಟು ನನಗೆ ನಾಲ್ಕು ಮಕ್ಕಳಾಗಬೇಕು ಅಂತ ಕಾಣುತ್ತೆ

ಏನೋ ಗುರುವಿಗಾಗಿ ಎನ್ನುತ್ತೀಯಾ, ತೀರಿಸು ಗಾಲವ' ಅಂದಳು.

ಗಾಲವನನ್ನ ಸತ್ಕರಿಸಿ ಹರ್ಯಶ್ವ ಆ ಕನ್ಯೆಯನ್ನು ಪಡೆದುಕೊಂಡ. ದೇಶ ಕಾಲ ನೋಡಿ ಒಂದು ಮಗುವನ್ನ ಪಡಕೊಂಡ – ಆ ರಾಜ

(ಹೀಗೆ ಮುಂದುವರಿಯುತ್ತದೆ. ಹಿನ್ನೆಲೆ: ಕೃಷ್ಣನು ಧೃತರಾಷ್ಟ್ರನ ಆಸ್ಥಾನಕ್ಕೆ ಬಂದು ಪಾಂಡವರೊಡನೆ ಸಂಧಾನದ ಮಾತುಗಳನ್ನು ಹೇಳಿದ ಮೇಲೆ ಸಭೆ ಮೌನವಾಗುತ್ತದೆ. ಕೃಷ್ಣನ ಹಿತವಚನಗಳನ್ನು ದುರ್ಯೋಧನ ಉಪೇಕ್ಷೆ ಮಾಡಿದಾಗ ಅವನನ್ನು ಒಪ್ಪಿಸಲು ಅಲ್ಲಿದ್ದ ಪರಶುರಾಮನು, ತನ್ನ ಬಗ್ಗೆ ಮಿತಿಮೀರಿ ಹೆಮ್ಮೆ ಪಡುತ್ತಿದ್ದ ದಂಭೋದ್ಭವ ರಾಜನಿಗಾದ ಗತಿಯ ಪ್ರಸಂಗವನ್ನೂ, ಹಾಗೇ 'ಗರುಡನ ಕೊಬ್ಬಡಗಿ ವಿನೀತನಾದ ಪ್ರಸಂಗವನ್ನು' ಕಣ್ವ ಋಷಿಯೂ ಹೇಳಿದ ಮೇಲೆ, ನಾರದನು ಹೇಳುವ ಮದೋನ್ಮತ್ತನಾಗಿ ಸ್ವರ್ಗದಿಂದ ಕೆಳಕ್ಕೆ ಬಿದ್ದ ಯಯಾತಿಯನ್ನು ಅವನ ಮಗಳಾದ ಮಾಧವಿಯ ನಾಲ್ವರು ಮಕ್ಕಳು ತಂತಮ್ಮ ಪುಣ್ಯ ನೀಡಿ ಮತ್ತೆ ಸ್ವರ್ಗಕ್ಕೆ ಕಳಿಸುತ್ತಾರೆ ಎನ್ನುವುದು ಪೂರ್ವಕಥೆ. ಇಲ್ಲಿ ಯಯಾತಿಯ ಮಗಳಾದ ಮಾಧವಿಗೆ ನಾಲ್ಕು ಗಂಡುಗಳಿಂದ ನಾಲ್ಕು ಮಕ್ಕಳಾಗಿ ಮತ್ತೆ ಅವಳು ಕನ್ಯೆಯಾಗುವುದು ಇಲ್ಲಿನ ಕಥಾ ಪ್ರಸಂಗ.)

# ಸಂಧಾನಕ್ಕೆ ಬಂದ ಕೃಷ್ಣ; ಕರ್ಣನೊಡನೆ ಒಳಮಾತು

ತಿಳಿದಿದೆ ನನಗೆ
ನೀನು ಗೆಳೆತನದಲ್ಲಿ ಪ್ರೀತೀಲಿ ಹೇಳತಿದೀಯ
ನನಗೆ ಅನುಮಾನ ಇಲ್ಲ ಕೇಶವ
ನೀ ಹೇಳೋದೆಲ್ಲ ನನ್ನ ಒಳ್ಳೇದಕ್ಕೇನೆ

ಕನ್ಯೆ ಆಗಿದ್ದಾಗ ಸೂರ್ಯನಿಂದ ನನ್ನನ್ನ ಬಸಿರು ಮಾಡಿಕೊಂಡಿದ್ದಳು. ಸೂರ್ಯನ ವಚನಕ್ಕೆ ಹುಟ್ಟಿದ ನನ್ನನ್ನ ಅವಳು ತೊರೆದುಬಿಟ್ಟಳು. ಹಾಗೆ ನಾನು ಹುಟ್ಟಿರೋದರಿಂದ ಧರ್ಮದ ಪ್ರಕಾರ ನಾನು ಪಾಂಡು ಮಗನೇನೆ. ಆದರೆ ಕುಂತಿ ನನ್ನನ್ನ ಹಾಗೆ ಬಿಸಾಕಿ ಹೋದದ್ದು ಸರಿಯೇನು?

ಅಧಿರಥ ನಿಜ ಅವನು ಸೂತರವನು. ತೇಲುತ್ತಾ ಹೋಗುತ್ತಿದ್ದ ನನ್ನನ್ನು ಕಂಡ ತನ್ನ ಮನೇಗೆ ಎತ್ತಿಕೊಂಡು ಬಂದ. ಪ್ರೀತಿಯಿಂದ ರಾಧೇಗೆ ಕೊಟ್ಟ

ನನ್ನ ಮೇಲಿನ ಅಕ್ಕರೆಯಿಂದ ರಾಧೇಗೆ ತಕ್ಷಣ ಹಾಲು ಇಳಕೊಂಡಿತು ನನ್ನ ಹೇಲು ಉಚ್ಚೆ ಬಾಚಿದೋಳು ಅವಳು ಮಾಧವ.

ಧರ್ಮ ತಿಳಿದಿದೀನಿ. ಧರ್ಮ ಶಾಸ್ತ್ರ ಸದಾ ಕೇಳತಿರತೀನಿ ಅವಳಿಗೆ ಸಿಗಬೇಕಾದ ಪಿಂಡಾನ ಹೇಗೆ ಕಸಿದುಕೊಳ್ಳಲಿ. ಅಲ್ಲದೆ ನನ್ನಪ್ಪ ಅಧಿರಥ ಅಂತಲೇ ಅಂದುಕೊಂಡಿದೀನಿ. ಅವನೂ ನನ್ನಪ್ಪ ಅಂತಲೇ ಅಂದುಕೊಂಡು ಸದಾ ಅಕ್ಕರೇಲಿದಾನೆ

ಅವನೇ ನನಗೆ ಜಾತಕರ್ಮ ಮಾಡಿದ

ಶಾಸ್ತ್ರದ ದೃಷ್ಟೀಲಿ ಮಗ ಅನ್ನೋ ಅಕ್ಕರೇಲಿ ವಿಧಿವತ್ತಾಗಿ ಮಾಡಿದ. ಬ್ರಾಹ್ಮಣರ ಕೈಲಿ ವಸುಷೇಣ ಅಂತ ಹೆಸರಿಡಿಸಿದ್ದೂ ಅವನೇ. ಪ್ರಾಯ ಬಂದಾಗ ತನ್ನ ಕಡೇಲೇ ಹೆಂಡಿರನ್ನ ಕೈ ಹಿಡಿಸಿದ. ಅವರಿಂದಲೇ ನನಗೆ ಮಕ್ಕಳು ಮೊಮ್ಮಕ್ಕಳು